ಮೂಡುಗಡ್ಡೆ ಪಟ್ಟಣದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯನ್ನು ಕನ್ನಡ ಮಾದರಿ ಶಾಲೆಯಾಗಿ ಪರಿವರ್ತಿಸಿದೆ. ಆದರೆ, ಮುಡುಶೆಡ್ಡೆಯಲ್ಲಿನ ಶಾಲೆಯ ಬಗ್ಗೆ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಪರಿಗಣಿಸಿರುವುದಿಲ್ಲ.

ಇ) 1) ಮಾದರಿ ಶಾಲೆಯಾಗಿ ಪರಿವರ್ತನೆಗೊಳ್ಳುವ ಶಾಲೆಯೂ ಸಾಧ್ಯವಾದಷ್ಟು ಮಟ್ಟಿಗೆ ಕೇಂದ್ರ ಸ್ಥಳದಲ್ಲಿರಬೇಕು. ಮತ್ತು ಶಾಲೆಯು 1 ರಿಂದ 7ನೇ ತರಗತಿಗಳನ್ನು ಹೊಂದಿರಬೇಕು.

2) ಶಾಲೆಯನ್ನು ಆರಿಸುವಾಗ 8 ಮತ್ತು ಇನ್ನೂ ಹೆಚ್ಚಿನ ಶಿಕ್ಷಕರ ಹುದ್ದೆಗಳು ಮಂಜೂರಾಗಿರುವ ಶಾಲೆಗಳನ್ನು ಆರಿಸುವುದು.

3) ಶಾಲೆಯಲ್ಲಿ ಸಾಕಷ್ಟು ಕೊಠಡಿಗಳಿರಬೇಕು. ಮತ್ತು ಆಟದ ಮೈದಾನ, ನೀರಿನ ಸೌಕರ್ಯ, ಶೌಚಾಲಯ ಅನುಕೂಲತೆ, ಶಾಲಾ ತೋಟ ಅಭಿವೃದ್ಧಿ ಪಡಿಸಲು ಹಾಗೂ ಅಗತ್ಯವಿರುವ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲು ಸಾಕಷ್ಟು ಸ್ಥಳಾವಕಾಶವಿರಬೇಕು.

ಈ) ಹಾಲಿ ಸರ್ಕಾರದ ನೀತಿಯಂತೆ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೊಂದರಂತೆ ಮಾದರಿ ಪ್ರಾಥಮಿಕ ಶಾಲೆ ತೆರೆಯಲು ಅವಕಾಶವಿದೆ. ಆದರೆ, ಈಗಾಗಲೇ ಸದರಿ ಕ್ಷೇತ್ರದಲ್ಲಿ ಶಾಲೆ ತೆರೆದಿರುವುದರಿಂದ ಮತ್ತೊಂದು ಶಾಲೆ ತೆರೆಯಲು ಅವಕಾಶವಿರುವುದಿಲ್ಲ.

ಸುದ್ದಗುಂಟೆ ಪಾಳ್ಯದಲ್ಲಿರುವ ಕ್ರೈಸ್ತ ಕನ್ನಡ ಪ್ರಾಥಮಿಕ ಶಾಲೆ

575 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಪ್ರದೇಶದಲ್ಲಿನ ಸುದ್ದಗುಂಟೆ ಪಾಳ್ಯದಲ್ಲಿರುವ ಕ್ರೈಸ್ತ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗೆ ಸರ್ಕಾರದವರು ಎಂದು ಅನುಮತಿ ನೀಡಿದರು?

ಆ) ಈ ಶಾಲೆಗೆ ಸರ್ಕಾರದವರು ಅನುದಾನವನ್ನು ನೀಡುತ್ತಿರುವರೇ?

ಇ) ಹಾಗಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಈ ಶಾಲೆಯನ್ನು 1985-86ನೇ ಸಾಲಿನಿಂದ ಪ್ರಾರಂಭಿಸಲು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಇವರು ದಿನಾಂಕ: 21-3-1986 ರಂದು ಅನುಮತಿ ನೀಡಿರುತ್ತಾರೆ.

ಆ) -ಇಲ್ಲ-

ಇ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸದರಿ ವೆಚ್ಚಕ್ಕೆ ಆಯವ್ಯಯದಲ್ಲಿ ಹಣದ ಕೊರತೆ ಇರುವುದರಿಂದ ಈ ಶಾಲೆಗೆ ಅನುದಾನವನ್ನು ಇನ್ನೂ ನೀಡಿರುವುದಿಲ್ಲ.

ಹುಬ್ಬಳ್ಳಿ ನಗರದಲ್ಲಿ ಕಾಲೇಜು ಪ್ರವೇಶಕ್ಕೆ ವಂತಿಗೆ

339 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಈ ವರ್ಷ ಕಾಲೇಜು ಪ್ರದೇಶಕ್ಕೆ ಡೊನೇಷನ್ ಹಾವಳಿ ಮಿತಿ ಮೀರಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಅದರ ನಿವಾರಣೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :